# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | (466) 408 |
| ಸದಸ್ಯರ ಹೆಸರು | ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 30.01.2026 |
| ಉತ್ತರಿಸಬೇಕಾದ ಸಚಿವರು | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |
| ಪ್ರಶ್ನೆ | ಉತ್ತರ |
| (ಅ) ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ವತಿಯಿಂದ ಬೆಂಗಳೂರಿನಲ್ಲಿ ನಡೆದ BTS 2025ರ ಸಮ್ಮೇಳನದಲ್ಲಿ ಎಷ್ಟು ಮಂದಿ ಪ್ರತಿನಿಧಿಗಳು ಮತ್ತು ಎಷ್ಟು ಪ್ರವಾಸಿಗರು ವಿವಿಧ ದೇಶಗಳಿಂದ ಭಾಗಿಯಾಗಿದ್ದರು; ಇದರಿಂದ ರಾಜ್ಯದ ಜಾಗತಿಕ ಹೂಡಿಕೆಗೆ ಪೂರಕವಾದ ಅಂಶಗಳು ಯಾವುವು; | ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯಿಂದ ಬೆಂಗಳೂರಿನಲ್ಲಿ ನಡೆದ BTS 2025ರ ಸಮ್ಮೇಳನದಲ್ಲಿ ಸುಮಾರು 92,500ಕ್ಕೂ ಹೆಚ್ಚು ಜನರು ಭಾಗಿಯಾಗಿದ್ದರು. ಸುಮಾರು 57 ದೇಶಗಳಿಂದ ಪ್ರತಿನಿಧಿಗಳು, ಭಾಷಣಕಾರರು ಹಾಗೂ ಪ್ರದರ್ಶನಕಾರರು ಇತ್ಯಾದಿ ಸೇರಿ ಅಂದಾಜು 600ಕ್ಕೂ ಅಧಿಕ ಪ್ರವಾಸಿಗರು ಈ ಸಮ್ಮೇಳನದಲ್ಲಿ ಭಾಗಿಯಾಗಿದ್ದರು.<br>ಈ ಸಮ್ಮೇಳನದಿಂದ ರಾಜ್ಯದ ಹೂಡಿಕೆಗೆ ಪೂರಕವಾದ ಅಂಶಗಳು ಈ ಕೆಳಕಂಡಂತಿದೆ:-<br>• **ಜಾಗತಿಕ ಹೂಡಿಕೆಗೆ ಪೂರಕವಾದ ಅಂಶಗಳು:-**<br>◦ **ಹೊಸ ನೀತಿಗಳ ಬಿಡುಗಡೆ:** ಸಮ್ಮೇಳನದಲ್ಲಿ ಕರ್ನಾಟಕದ ಹೊಸ ಮಾಹಿತಿ ತಂತ್ರಜ್ಞಾನ (IT) ನೀತಿ ಮತ್ತು ಸ್ಪೇಸ್‌ಟೆಕ್ (Space Tech) ನೀತಿಗಳನ್ನು ಬಿಡುಗಡೆ ಮಾಡಲಾಗಿದ್ದು, ಇದು ಹೂಡಿಕೆದಾರರಿಗೆ ಸ್ಪಷ್ಟ ಮಾರ್ಗಸೂಚಿ ನೀಡಿದೆ.<br>◦ **ಬಂಡವಾಳ ಹೂಡಿಕೆ ಮತ್ತು ನಿಧಿ:** ಎಐ (AI) ಮತ್ತು ಡೀಪ್ ಟೆಕ್ ಕ್ಷೇತ್ರಗಳ ಅಭಿವೃದ್ಧಿಯನ್ನು ಉತ್ತೇಜಿಸುವ ಉದ್ದೇಶದಿಂದ ವೆಂಚರ್ ಕ್ಯಾಪಿಟಲ್ (VC) ಸಹಯೋಗದೊಂದಿಗೆ ರೂ.400 ಕೋಟಿ ಮೊತ್ತದ ನಿಧಿಯನ್ನು ಘೋಷಿಸಲಾಗಿದೆ.<br>◦ **ಹೂಡಿಕೆದಾರರ ಭೇಟಿ:** 36 ಪ್ರಮುಖ ಹೂಡಿಕೆದಾರರ ಮುಂದೆ 146 ಸ್ಟಾರ್ಟ್‌ಅಪ್‌ಗಳು ತಮ್ಮ ಯೋಜನೆಗಳನ್ನು ಪ್ರಸ್ತುತಪಡಿಸಿವೆ.<br>◦ **ಜಾಗತಿಕ ಸಂಪರ್ಕ:** ಸಚಿವ ಮಟ್ಟದ ನಿಯೋಗಗಳು ಮತ್ತು ರಾಯಭಾರಿಗಳ ಭಾಗವಹಿಸುವಿಕೆಯು ಅಂತರಾಷ್ಟ್ರೀಯ ಹೂಡಿಕೆಗೆ ಬಲವಾದ ವೇದಿಕೆ ಕಲ್ಪಿಸಿದೆ. |

| | |
|---|---|
| (ಆ) BTS 2025 ಸಮ್ಮೇಳನದಿಂದ ಕರ್ನಾಟಕಕ್ಕೆ ಆದ ಮತ್ತು ಆಗುವ ಲಾಭಗಳೇನು; ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರಿಗೆ ಮತ್ತು ಕರ್ನಾಟಕಕ್ಕೆ ಯಾವ ರೀತಿಯ ಖ್ಯಾತಿ ಬಂದಿರುತ್ತದೆ; ಇದರಿಂದ ಅಂತರಾಷ್ಟ್ರೀಯ ಮಟ್ಟದಲ್ಲಿ ಬ್ರಾಂಡ್ ಮೌಲ್ಯ ಬೆಳೆದಿದೆಯೇ; | • **BTS 2025 ಸಮ್ಮೇಳನದಿಂದ ಕರ್ನಾಟಕಕ್ಕೆ ಆದ ಮತ್ತು ಆಗುವ ಲಾಭಗಳು:-**<br><br>◦ **ಉದ್ಯಮಶೀಲತೆ ಮತ್ತು ನಾವೀನ್ಯತೆ:** ಸಮ್ಮೇಳನದ ಇನ್ನೋವೇಶನ್ ಸ್ಟೇಜ್‌ನಲ್ಲಿ 51 ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ.<br>◦ **ಫ್ಯೂಚರ್ ಮೇಕರ್ಸ್ ಕಾನ್ಕ್ಲೇವ್ (FMC):** ಮೊದಲ ಬಾರಿಗೆ ನಡೆಸಲಾದ ಈ ಕಾರ್ಯಕ್ರಮದಲ್ಲಿ 12,000ಕ್ಕೂ ಹೆಚ್ಚು ಸಂಸ್ಥಾಪಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದು, ಮುಂದಿನ ಪೀಳಿಗೆಯ ಉದ್ಯಮಿಗಳನ್ನು ತಯಾರು ಮಾಡಲು ಸಹಕಾರಿಯಾಗಿದೆ.<br>◦ **ನೆಟ್‌ವರ್ಕಿಂಗ್:** 'InterlinX' (B2B, B2G, Partnering Tool) ಮೂಲಕ 5,370ಕ್ಕೂ ಹೆಚ್ಚು ಸಭೆಗಳು ನಡೆದಿದ್ದು, ಇದು ಭವಿಷ್ಯದ ವ್ಯಾಪಾರ ಒಪ್ಪಂದಗಳಿಗೆ ಅಡಿಪಾಯ ಹಾಕಿದೆ.<br>◦ **ತಾಂತ್ರಿಕ ಪ್ರದರ್ಶನ:** 20 ರಾಜ್ಯಗಳ 1,015 ಪ್ರದರ್ಶಕರು ಭಾಗವಹಿಸಿದ್ದು, ಕರ್ನಾಟಕವು ರಾಷ್ಟ್ರದ ತಾಂತ್ರಿಕ ನಾಯಕತ್ವವನ್ನು ಮುನ್ನಡೆಸುತ್ತಿದೆ.<br><br>• **ಅಂತರಾಷ್ಟ್ರೀಯ ಖ್ಯಾತಿ ಮತ್ತು ಬ್ರಾಂಡ್ ಮೌಲ್ಯ:-**<br><br>◦ **ಡಿಜಿಟಲ್ ತಲುಪುವಿಕೆ:** ಸಮ್ಮೇಳನದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ 5.19 ಕೋಟಿ ಜನರನ್ನು ತಲುಪಲಾಗಿದ್ದು, ಒಟ್ಟು 12.9 ಕೋಟಿ ಇಂಪ್ರೆಶನ್‌ಗಳನ್ನು ದಾಖಲಿಸಿದೆ.<br>◦ **ಗ್ರೀನ್ ಬಿಟಿಎಸ್ (Green BTS):** ಪರಿಸರಸ್ನೇಹಿ ಕ್ರಮಗಳ ಮೂಲಕ ಶೇ.83ರಷ್ಟು ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡಿ, ಏಷ್ಯಾದ ಅತಿದೊಡ್ಡ ಸುಸ್ಥಿರ ತಾಂತ್ರಿಕ ಕಾರ್ಯಕ್ರಮವಾಗಿ ಬೆಂಗಳೂರು ಜಾಗತಿಕವಾಗಿ ಗುರುತಿಸಿಕೊಂಡಿದೆ.<br>◦ **ತಂತ್ರಜ್ಞಾನ ಚಾಲಿತ ಅನುಭವ:** ಬ್ಲಾಕ್‌ಚೈನ್ ಆಧಾರಿತ ಪ್ರಮಾಣಪತ್ರಗಳು (17,157) ಮತ್ತು ಎಐ ಚಾಲಿತ ಕರೆಗಳ ಬಳಕೆಯು ಬೆಂಗಳೂರಿನ ತಾಂತ್ರಿಕ ಶಕ್ತಿಯನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶಿಸಿದೆ.<br>◦ **ನವೀನ ಪ್ರಯತ್ನ:** ಭಾರತದ ತಾಂತ್ರಿಕ ಸಮ್ಮೇಳನವೊಂದರಲ್ಲಿ ಮೊದಲ ಬಾರಿಗೆ ಮೆಟ್ರೋ ಟಿಕೇಟಿಂಗ್ ವ್ಯವಸ್ಥೆಯನ್ನು ಸಂಯೋಜಿಸುವ ಮೂಲಕ ಬೆಂಗಳೂರು ಅತ್ಯಾಧುನಿಕ ನಗರ ಎಂಬ |

| | |
|---|---|
| | ಖ್ಯಾತಿಯನ್ನು ಗಳಿಸಿದೆ. |
| (ಇ) ಕರ್ನಾಟಕ ಜಾಗತಿಕ ಸಾಮರ್ಥ್ಯ ಕೇಂದ್ರ ನೀತಿ ಯಾವಾಗ ಪ್ರಕಟಗೊಂಡಿರುತ್ತದೆ ಮತ್ತು KATALYST ಯೋಜನೆ ಕರ್ನಾಟಕದಲ್ಲಿ ಎಂದಿನಿಂದ ಜಾರಿಯಾಗಿರುತ್ತದೆ; ಹೊಸ ಬಂಡವಾಳ ತೊಡಗಿಸುವಿಕೆಗೆ ಯಾವ ರೀತಿ ಕರ್ನಾಟಕಕ್ಕೆ ಅನುಕೂಲವಾಗಿದೆ; | ಕರ್ನಾಟಕ ಜಾಗತಿಕ ಸಾಮರ್ಥ್ಯ ಕೇಂದ್ರ ನೀತಿಯು ದಿನಾಂಕ:03.12.2024ರಂದು ಪ್ರಕಟಣೆಗೊಂಡಿರುತ್ತದೆ ಮತ್ತು KATALYST ಯೋಜನೆಯು ಸದರಿ ದಿನಾಂಕದಿಂದಲೇ ಜಾರಿಯಾಗಿರುತ್ತದೆ.<br>ಈ ಯೋಜನೆಯಿಂದ ಹೊಸ ಬಂಡವಾಳ ತೊಡಗಿಸುವಿಕೆಗೆ ಈ ಕೆಳಕಂಡ ಅಂಶಗಳು ಅನುಕೂಲವಾಗಲಿದೆ.<br>• ಉದಾರ ಹಣಕಾಸು ಮತ್ತು ಕಾರ್ಯಾಚರಣೆಯ ಪ್ರೋತ್ಸಾಹ.<br>• ನಾವೀನ್ಯತೆ, ಸಂಶೋಧನೆ ಮತ್ತು ಅಭಿವೃದ್ಧಿ ಮತ್ತು ಹೆಚ್ಚಿನ ಮೌಲ್ಯದ ಕೆಲಸಗಳಿಗೆ ಬೆಂಬಲ.<br>• ಬೆಂಗಳೂರಿನಾಚೆ ಇರುವ GCCಗಳಿಗೆ ಪ್ರೋತ್ಸಾಹ.<br>• ಪ್ರತಿಭೆ ಹಾಗೂ ಪರಿಸರ ವ್ಯವಸ್ಥೆಗಳಿಗೆ ಬೆಂಬಲ.<br>• ಹೂಡಿಕೆದಾರರಿಗೆ ಸ್ಥಿರವಾದ, ಊಹಿಸಬಹುದಾದ ವಾತಾವರಣದ ಸೃಷ್ಟಿ |
| (ಈ) ಇನ್ನೋವೆಟ್ ಕರ್ನಾಟಕ ಮೂಲಕ ಯಾವ ಯಾವ ವಲಯದಲ್ಲಿ ಉದ್ಯೋಗಾವಕಾಶಗಳು ಉಂಟಾಗಿರುತ್ತವೆ ಮತ್ತು ಇದರಿಂದ ಕರ್ನಾಟಕದ ಎಷ್ಟು ಯುವಕರಿಗೆ ಉದ್ಯೋಗಾವಕಾಶ ದೊರೆಯುತ್ತದೆ? | ಇನ್ನೋವೆಟ್ ಕರ್ನಾಟಕದ ಮೂಲಕ ಸರ್ಕಾರವು ಪ್ರಕಟಿಸಿರುವ ನೀತಿಗಳಡಿಯಲ್ಲಿ ಯುವ ಜನಾಂಗಕ್ಕೆ ದೊರೆತ ವಲಯವಾರು ಉದ್ಯೋಗಾವಕಾಶಗಳು ಈ ಕೆಳಕಂಡಂತಿದೆ:-<br>ಮಾಹಿತಿ ತಂತ್ರಜ್ಞಾನ ವಲಯ: ಇಲಾಖೆಯಲ್ಲಿ ನೋಂದಣಿಯಾದ ಸುಮಾರು 544 ಕಂಪನಿಗಳಿಂದ ಸುಮಾರು 4,03,960ಕ್ಕೂ ಹೆಚ್ಚು ಉದ್ಯೋಗಾವಕಾಶವಾಗಿರುತ್ತದೆ.<br>ಜೈವಿಕ ತಂತ್ರಜ್ಞಾನ ವಲಯ: ಜೈವಿಕ ತಂತ್ರಜ್ಞಾನ ನೀತಿಯಡಿಯಲ್ಲಿ ಇಲಾಖೆಯಲ್ಲಿ 64 ಬಿಟಿ ಕಂಪನಿಗಳು ನೋಂದಾಯಿಸಿಕೊಂಡಿವೆ ಮತ್ತು ಒಟ್ಟು 8583 ಜನರು ಈ ಕಂಪನಿಗಳಲ್ಲಿ ಉದ್ಯೋಗಿಗಳಾಗಿದ್ದಾರೆ.<br>ಸ್ಟಾರ್ಟ್‌ಅಪ್ ವಲಯ: ಕರ್ನಾಟಕ ಸ್ಟಾರ್ಟ್‌ಅಪ್ ನೀತಿಯಡಿಯಲ್ಲಿ ಇಲ್ಲಿಯವರೆಗೆ ಸುಮಾರು 1227 ನವೋದ್ಯಮಗಳಿಗೆ ಆರ್ಥಿಕ ಅನುದಾನ ಒದಗಿಸಿದ್ದು, ಸದರಿ ಸ್ಟಾರ್ಟ್‌ಅಪ್‌ಗಳಲ್ಲಿ ಸುಮಾರು 6000ಕ್ಕೂ ಹೆಚ್ಚು ಉದ್ಯೋಗಾವಕಾಶಗಳು ಲಭಿಸಿರುತ್ತದೆ.<br>ಇ.ಎಸ್.ಡಿ.ಎಂ ವಲಯ: KESDM ನೀತಿಯಡಿಯಲ್ಲಿ ಕಿಟ್ಸ್ (ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ) ನಲ್ಲಿ ನೋಂದಾಯಿಸಲಾದ ಕಂಪನಿಗಳಿಂದ ಸುಮಾರು 3000ಕ್ಕೂ ಹೆಚ್ಚು ಉದ್ಯೋಗಾವಕಾಶವಾಗಿರುತ್ತದೆ ಹಾಗೂ ವಿಶೇಷ ಪ್ರೋತ್ಸಾಹಕ ಯೋಜನೆಯಡಿಯಲ್ಲಿ ಪ್ರೋತ್ಸಾಹಕ |

| | |
|---|---|
| | ಪಡೆದ ಕಂಪನಿಗಳಿಂದ 4000ಕ್ಕೂ ಹೆಚ್ಚು ಉದ್ಯೋಗಾವಕಾಶವಾಗಿರುತ್ತದೆ.<br>**AVGC** ವಲಯ: ಅನಿಮೇಷನ್ ವಿಶ್ಯುಯಲ್ ಎಫೆಕ್ಟ್ ಗೇಮಿಂಗ್ ಮತ್ತು ಕಾಮಿಕ್ಸ್ (AVGC) ನೀತಿ ಅಡಿಯಲ್ಲಿ ಈ ವಲಯದ ಉದ್ಯಮಗಳ ಮಾಹಿತಿ ಪ್ರಕಾರ ಸುಮಾರು 18,000ಕ್ಕೂ ಹೆಚ್ಚು ಉದ್ಯೋಗಾವಕಾಶವಾಗಿರುತ್ತದೆ. |

ಐಟಿಬಿಟಿ 12 ಎಲ್‌ಸಿಎಂ 2026

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್,
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು